**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 25167/2018 ಚಾಸಾಃ 2 ಪ್ರಾಸಾಃ 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ.ಎನ್.ನಾಗರಾಜಯ್ಯ |
| ತಂದೆಯ ಹೆಸರು | : | ನೀಲಕಂಠಯ್ಯ |
| ವಯಸ್ಸು | : | 69 ವರ್ಷ |
| ವೃತ್ತಿ | : | ರಿಯಲ್ ಎಸ್ಟೇಟ್ |
| ವಾಸ | : | ರಾಜಾಜಿನಗರ, ಬೆಂಗಳೂರು |

**ಸಾಕ್ಷಿಯನ್ನು ದಿಃ 04.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ನಾನು ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ. ರಾಜಾಜಿನಗರದಲ್ಲಿರುವ ಕಚೇರಿಯಲ್ಲಿ ಹಿರಿಯ ಸದಸ್ಯನಾಗಿರುತ್ತೇನೆ. ಆರೋಪಿಯು ಸದರಿ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಆರೋಪಿಯು ತನ್ನ ಅಧಿಕಾರಿಯ ಅವಧಿಯಲ್ಲಿ ಸೊಸೈಟಿಯ ನಿಯಮಗಳನ್ನು ಪಾಲನೆ ಮಾಡದೇ ಸದಸ್ಯರುಗಳನ್ನು ನೊಂದಣಿ ಮಾಡಿಕೊಂಡಿದ್ದರು. ಆರೋಪಿಯು 1ನೇ ಶೇರು ಪುಸ್ತಕದ ಕ್ರ.ಸಂ.235 ರಿಂದ 269 ರವರೆಗಿನ ಶೇರುದಾರರ ವಿವರವಿದ್ದ ಪುಟಗಳನ್ನು ಹರಿದು ಹಾಕಿದ್ದರು. ಕಚೇರಿಯಲ್ಲಿದ್ದ ಹಣ ಸಂದ ರಶೀದಿ ಪುಸ್ತಕಗಳು ನಿವೇಶನ ಹಂಚಿಕೆ ಪುಸ್ತಕಗಳು, ಲೆಟರ್ ಹೆಡ್ ಗಳನ್ನು ಮತ್ತು ಸೀಲುಗಳನ್ನು ತೆಗೆದುಕೊಂಡು ಹೋಗಿ ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದರು. ಆರೋಪಿ ಅಕ್ರಮದ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಈ ಸಂಬಂಧ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು.

ದಿನಾಂಕಃ27.04.2018 ರಂದು ಪೊಲೀಸರು ನನ್ನನ್ನು ಕರೆಸಿದ್ದರು. ಪೊಲೀಸರು ಆರೋಪಿಯ ಚಿಕ್ಕಮ್ಮನ ಮನೆಯಲ್ಲಿ ದಾಖಲಾತಿಗಳನ್ನು ಇಟ್ಟಿದ್ದು ಅದನ್ನು ಜಪ್ತಿ ಮಾಡಲು ಪಂಚ ಸಾಕ್ಷಿಯಾಗುವಂತೆ ಕೋರಿರುತ್ತಾರೆ. ಆ ದಿನ

ಆರೋಪಿಯು ನಮ್ಮನ್ನು ಚೋಳೂರು ಪಾಳ್ಯ ಮನೆ ನಂ.78ಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಒಂದು ರೂಮಿನಲ್ಲಿ ಇಟ್ಟಿದ್ದ ಒಂದು ಬಟ್ಟೆಯ ಗಂಟನ್ನು ಹಾಜರುಪಡಿಸಿರುತ್ತಾರೆ. ಸದರಿ ಬಟ್ಟೆಯ ಗಂಟನ್ನು ತೆಗೆದು ನೋಡಿದಾಗ ಅದರಲ್ಲಿ ಹಳೆಯ ಪುಸ್ತಕಗಳು ಮತ್ತು ನಮ್ಮ ಸೊಸೈಟಿಗೆ ಸಂಬಂಧಪಟ್ಟ ಪುಟ ಸಂ.236 ರಿಂದ 269 ರವರೆಗಿನ ಹಾಳೆಗಳು ಇದ್ದವು. ನಮ್ಮ ಸೊಸೈಟಿಯ ಚುನಾವಣೆಯಲ್ಲಿ ಸ್ಪರ್ಧಿಸುವ ವಿರೋಧಿ ಪಕ್ಷಗಳಾದ ರಾಜಶೇಖರ, ಶ್ರೀಕಂಠ ಮತ್ತು ಚಿಕ್ಕಪುಟ್ಟರವರಿಗೆ ಸಹಾಯ ಮಾಡಲು ಸದರಿ ಕೃತ್ಯ ಮಾಡಿರುವುದಾಗಿ ಆರೋಪಿ ತಿಳಿಸಿರುತ್ತಾರೆ. ಸದರಿ 36 ಪುಟಗಳ ಹಾಳೆಗಳನ್ನು ಪೊಲೀಸರು ಜಪ್ತಿ ಮಾಡಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಮತ್ತು ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಿದ್ದು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1ಬಿ ಎಂದು ಗುರ್ತಿಸಲಾಯಿತು. 36 ಹಾಳೆಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-2 ರಿಂದ 37 ಎಂದು ಗುರ್ತಿಸಲಾಯಿತು.

ಆರೋಪಿಯು ಸೊಸೈಟಿಯಿಂದ ತಂದಿರುವ ಲೆಡ್ಜರ್ ಪುಸ್ತಕ ಮತ್ತು ರಶೀದಿ ಪುಸ್ತಕಗಳು ಹಾಗೂ ಇತರೆ ದಾಖಲಾತಿಗಳನ್ನು ತಮ್ಮ ಮನೆಯಲ್ಲಿ ಇಟ್ಟಿರುವುದಾಗಿ ಅಲ್ಲಿಗೆ ಕರೆದುಕೊಂಡು ಹೋದಲ್ಲಿ ತೋರಿಸುವುದಾಗಿ ತಿಳಿಸಿದರು. ದಿನಾಂಕಃ28.04.2018 ರಂದು ಪೊಲೀಸರು ನನ್ನನ್ನು ರಾಜಾಜಿನಗರದ ಮನೆ ನಂ.178 ಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯು ತನ್ನ ಮನೆ ಒಳಗಡೆ ಹೋಗಿ ಒಂದು ರೂಮಿನಿಂದ ಒಂದು ಬ್ಯಾಗ್ ಅನ್ನು ತಂದು ಹಾಜರುಪಡಿಸಿರುತ್ತಾರೆ. ಸದರಿ ಬ್ಯಾಗ್ ಅನ್ನು ತೆಗೆದು ನೋಡಿದಾಗ ಅಲ್ಲಿ ರಶೀದಿ ಪುಸ್ತಕಗಳು ಮತ್ತು ಇತರೆ ದಾಖಲಾತಿಗಳು ಇರುವುದು ಕಂಡು ಬಂದಿರುತ್ತದೆ. ಒಟ್ಟು 14 ರಶೀದಿ ಪುಸ್ತಕಗಳು ಇದ್ದವು. ಸದರಿ 14 ಪುಸ್ತಕಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-38 ರಿಂದ 51 ಎಂದು ಗುರ್ತಿಸಲಾಯಿತು. ಸದರಿ ರಶೀದಿ ಪುಸ್ತಕಗಳು

ಕ್ರ.ಸಂ.251 ರಿಂದ ಪ್ರಾರಂಭವಾಗಿ ಕ್ರ.ಸಂ.1000 ಕ್ಕೆ ಮುಕ್ತಾಯವಾಗಿರುತ್ತದೆ. ಮುಂದುವರೆದು ಆರೋಪಿಯು ಸೊಸೈಟಿಯ ನಿವೇಶನ ಹಂಚಿಕೆ ಪತ್ರದ ಪುಸ್ತಕ ಮತ್ತು ಖಾಲಿ ಲೆಟರ್ ಹೆಡ್ ಗಳು ಇರುವ ಪುಸ್ತಕಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ನಿಪಿ-52 ಮತ್ತು 53 ಎಂದು ಗುರ್ತಿಸಲಾಯಿತು. ಮೇಲ್ಕಂಡ ಎಲ್ಲಾ ರಶೀದಿ ಪುಸ್ತಕ ಮತ್ತು ನಿವೇಶನ ಹಂಚಿಕೆ ಪುಸ್ತಕ ಹಾಗೂ ಲೆಟರ್ ಹೆಡ್ ಪುಸ್ತಕವನ್ನು ನನ್ನ ಸಮಕ್ಷಮ ಪಂಚನಾಮೆ ಮಾಡಿ ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆ ಮತ್ತು ಅದರಲ್ಲಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-54 ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-54ಎ ಎಂದು ಗುರ್ತಿಸಲಾಯಿತು. ಪಂಚನಾಮೆ ಮಾಡಿದ ನಂತರ ಪೊಲೀಸರು ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಾನು ಪೊಲೀಸರ ಮುಂದೆ ಹೇಳಿಕೆಗಳನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ**ಃ ಪಾಟೀ ಸವಾಲು ಮಾಡಲು ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**